# ನಮ್ಮಲ್ಲೇ ಮೊದಲು

■ ಬಿ.ಎಲ್. ವೇಣು

ಕಲೆ: ಬಾದಲ್ ನಂಜುಂಡಸ್ವಾಮಿ

ತನ್ನನ್ನು ಎಲ್ಲರೂ ಗುರುತಿಸಬೇಕು. ಪ್ರಶಂಸಿಸಬೇಕು. ದಿನವೂ ಸುದ್ದಿಯಲ್ಲಿರಬೇಕೆಂಬ ಮಹತ್ವಾಕಾಂಕ್ಷೆಯ ಹುಡುಗನಾಗಿದ್ದರಿಂದಲೇ ಕಿರಣ್, ಎಂಜಿನಿಯರಿಂಗ್‌ನಲ್ಲಿ ಡಿಸ್ಟಿಂಕ್ಷನ್ ಗಳಿಸಿದರೂ ಜರ್ನಲಿಸಂ ಕೂಡ ಓದಿ ಪಾಸ್ ಮಾಡಿದ. ಹೈದರಾಬಾದ್ ಕಂಪನಿಯೊಂದರ ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ಸೆಲೆಕ್ಟ್ ಆಗಿ ಸಾವಿರಾರು ರೂಪಾಯಿ ವೇತನದಾರನಾದರೂ ವೃತ್ತಿಯಲ್ಲಿ ತೃಪ್ತಿಕಾಣದೆ ಟೀವಿ ಚಾನಲ್ ಒಂದು ಸಂದರ್ಶನ ಕರೆದಾಗ ಹಿಗ್ಗಿನಿಂದ ಹೋದ. ಅಲ್ಲಿ ತನ್ನ ಆಜಾನುಬಾಹು ದೇಹದ ಕಲರ್–ಫಿಗರ್ ಜೊತೆಗಿದ್ದ ಕರ್ಜುವಾಯ್ಸ್‌ನಿಂದಾಗಿ ಹೆಡ್‌ನ ಗಮನ ಸೆಳೆದ. ಸೆಲೆಕ್ಟೂ ಆದ.

ತನ್ನ ಚಾಕಚಕ್ಯತೆ, ಮಾತುಗಾರಿಕೆ, ಕಲ್ಪನೆಗಳ ಪ್ರಾಜೆಕ್ಟ್ ಬಗ್ಗೆ ಬಣ್ಣಿಸಿ ಸ್ಟೋರಿಗಳನ್ನು ಕ್ರಿಯೇಟ್ ಮಾಡಬಲ್ಲ ಸೃಜನಶೀಲತೆಯಿಂದಾಗಿ ಅಲ್ಪಕಾಲದಲ್ಲಿಯೇ 'ಧೀರ ಟೀವಿ'ಯ ಚಾನಲ್ ಹೆಡ್‌ನ ಮೆಚ್ಚುಗೆಗೆ ಪಾತ್ರನಾದನಲ್ಲದೆ, ಎಲ್ಲಾ ವಿಭಾಗಗಳಲ್ಲೂ ತೊಡಗಿಸಿಕೊಂಡಿದ್ದರ ಫಲವಾಗಿ ಚಾನಲ್‌ಗೆ ಅನಿವಾರ್ಯವೆನ್ನಿಸಿದ. ಇತ್ತೀಚೆಗೆ ಯಾವುದೇ ಹೊಸ ಪ್ರಾಜೆಕ್ಟ್, ಸ್ಟೋರಿ ಸೆಲೆಕ್ಷನ್, ರಿಯಾಲಿಟಿ ಶೋ, ಸೀರಿಯಲ್‌ಗಳ ಸೆಲೆಕ್ಷನ್ ಮಾಡುವ ಮುನ್ನ ಚಾನಲ್ ಹೆಡ್‌ಗಳು ಕಿರಣನ ಅಭಿಪ್ರಾಯವನ್ನು ಕೇಳದೆ ಸ್ಟೆಪ್ ತೆಗೆದುಕೊಳ್ಳದಷ್ಟು ಪ್ರಭಾವ ಬೀರಿ ವಜನ್ ಹೆಚ್ಚಿಸಿಕೊಂಡ.



ಚಾನಲ್‌ನ ಟಿ.ಆರ್.ಪಿ. ಹೆಚ್ಚಿಸುವ ಕಲೆ ಕರಗತ ಮಾಡಿಕೊಂಡ. ಕೂತಲ್ಲಿ ಕೂರದಷ್ಟು ಬಿಜಿಯಾದ, ಮನೆಗಿಂತ ಟೀವಿ ಸ್ಟುಡಿಯೋಗಳಲ್ಲೇ ಹೆಚ್ಚು ಸಮಯ ಕಳೆಯಹತ್ತಿದ. ಹೀಗಾಗಿ ಮನೆಯವರ ಆಕ್ರೋಶಕ್ಕೆ ಪಕ್ಕಾದ. ಬೆಳಿಗ್ಗೆ ಟಿಫಿನ್ ಮುಗಿಸಿ ಬೈಕ್‌ಗೆ 'ಕಿಕ್' ಹೊಡೆದನೆಂದರೆ ಮನೆ ಸೇರೋದು ಡಿನ್ನರ್‌ಗೇ. ಎಷ್ಟೋ ಸಲ ಹೊರಗೆ ತಿಂದು ಬರುತ್ತಿದ್ದ ಅವನಿಗೆ ಹಾಸಿಗೆ ಸಿಕ್ಕರದೇ ಸ್ವರ್ಗ.

ಮೊದಲು ನ್ಯೂಸ್‌ರೀಡರ್ ಆಗಿ ಖುಷಿ ಕಂಡುಕೊಂಡ ಕಿರಣ್‌ಗೆ ಅದು ಬೋರ್ ಅನ್ನಿಸಿತು. ಹೇಳಿದ್ದನ್ನೇ ಹೇಳಬೇಕು. ತೋರಿಸಿದ್ದನ್ನೇ ತೋರಬೇಕು. ಅಲ್ಲೇನು ಕ್ರಿಯೇಟಿವಿಟಿ ಇಲ್ಲವೆನ್ನಿಸಿದೊಡನೆ ಬೇರೆ ಬೇರೆ ಡಿವಿಜನ್‌ಗಳತ್ತ ಕಣ್ಣಿಟ್ಟ. ಕ್ರೈಮ್ ಸ್ಟೋರಿ ಡಿಪಾರ್ಟ್‌ಮೆಂಟನತ್ತ ಹೆಜ್ಜೆ ಹಾಕಿದ. ದಿನವೂ ರಾತ್ರಿ ಹತ್ತರ ಮೇಲೆ ನಿರೂಪಿಸುವ 'ಮಿಡ್‌ನೈಟ್ ರೌಂಡ್ಸ್' ಕಾರ್ಯಕ್ರಮಕ್ಕೆ ಹೊಸ ಸ್ವರೂಪಕೊಟ್ಟ. ಬಹುಬೇಗ ಪ್ರಸಿದ್ಧಿಯ ರುಚಿ ನೋಡಿದ. ಟಿ.ಆರ್.ಪಿ.ಯೂ ಏರಿತು. ಮಧ್ಯರಾತ್ರಿ ನಡೆವ ಅನೈತಿಕ ಚಟುವಟಿಕೆಗಳು, ಪೊಲಿಟಿಶಿಯನ್ಸ್ ಗೇಮ್ಸ್, ಬೀದಿ ಬದಿ ರೇಪ್ಸ್, ನೈಟ್‌ಗರ್ಲ್ಸ್ ಅಡ್ಡೆಗಳನ್ನು ಪತ್ತೆ ಹಚ್ಚುವ ಸಲುವಾಗಿ ರಾತ್ರಿಯೆಲ್ಲಾ ತಿರುಗಲು ತಿಪ್ಪನಾದ. ಅವನಿಗಾಗಿ ಚಾನಲ್‌ನವರು ಕಾರನ್ನು ಕೊಟ್ಟು ಬೆನ್ನೂ ತಟ್ಟಿದರು. ಕಿರಣ್‌ನದ್ದೋ ವೇಗದ ನಡೆ. ಮೊದಲ ಬ್ರೇಕಿಂಗ್ ನ್ಯೂಸ್ ತನ್ನದೇ ಆಗಬೇಕೆಂಬ ಹಪಹಪಿ. ತಮ್ಮ 'ಧೀರ ಟಿವಿ'ಯಲ್ಲೇ ಮೊದಲು ಪ್ರಸಾರವಾಗಲೆಂಬ ಕಾತರದಿಂದಾಗಿ ಯಂತ್ರದಂತೆ ದುಡಿದ.

ಕೆಂಪು ರಾಗಿ ಮತ್ತು ಕೆಂಪು ಜೋಳದಂತಹ ಸುಮಾರು ಧಾನ್ಯಗಳನ್ನು ಕಡಿಮೆ ರೇಟಿಗೆ ಕೊಂಡ ವ್ಯಾಪಾರಿಗಳು ಅವಕ್ಕೆ ಸೋಡಿಯಂ ಸಲ್ಫೇಟ್ ಬೆರೆಸಿ ಅಚ್ಚ ಕರಿ ರಾಗಿ, ಬಿಳಿಜೋಳವನ್ನಾಗಿ ಪರಿವರ್ತಿಸಿ, ಅವುಗಳು ದೊಡ್ಡ ಕಾಳಿನಂತೆಯೂ ಕಾಣುವಂತಾದಾಗ ಮುಗಿಬಿದ್ದ ಗಿರಾಕಿಗಳಿಗೆ ಡಬ್ಬಲ್ ರೇಟ್‌ಗೆ ಮಾರಾಟಮಾಡುವ ದಂಧೆಯನ್ನು ಪತ್ತೆಹಚ್ಚಿದ. ನೇರವಾಗಿ ಗೋಡೌನ್‌ಗಳಿಗೇ ನುಗ್ಗಿ ದಬಾಯಿಸಿ, ಸಂದರ್ಶಿಸಿ ಸಾಕ್ಷಿಸಮೇತ ಅವರುಗಳ ಮೋಸವನ್ನು ವೀಡಿಯೊ ಮಾಡಿ ಬಯಲಿಗಿಟ್ಟ. ಸಲ್ಫೇಟ್ ಮಿಶ್ರಣದಿಂದಾಗಿ 'ಕ್ಯಾನ್ಸರ್' ಬರುವ ಬಗ್ಗೆ 'ಧೀರ ಟಿವಿ' ಬಿತ್ತರಿಸಿದಾಗ ಜನ ಗಾಬರಿಗೊಂಡಿದ್ದುಂಟು.

ಬೆಣ್ಣೆಯಲ್ಲಿ ದನದ ಕೊಬ್ಬನ್ನು ಮಿಕ್ಸ್ ಮಾಡುವ ಹಾಲಿಗೆ ಯೂರಿಯಾ ಬೆರೆಸುವ ಕುರಿತು ವಾರಗಟ್ಟಲೆ ಟೀಸರ್ ತೋರಿಸಿ ಪ್ರಸಾರ ಮಾಡಿದಾಗಲಂತೂ ಜನ ಕಾದು ಕೂತು ನೋಡಿದರು. ಕಿರಣನನ್ನು ಕಂಡೊಡನೆ ಮದ್ದುಚುಚ್ಚಿ ಹಣ್ಣುಗಳ ಬಣ್ಣಗಾತ್ರ ಹೆಚ್ಚಿಸುವ ಹಣ್ಣಿನ ವ್ಯಾಪಾರಿಗಳು ಒಳಗೇ ನಡುಗುವಂತಾಯಿತು. ದೊಡ್ಡದೊಡ್ಡ ಹೋಟೆಲ್‌ಗಳು ಆನ್‌ಲೈನ್ ಮೂಲಕ ಕ್ಷಣದಲ್ಲೇ ಹೇಳಿದ ಸ್ಥಳಕ್ಕೆ ಫುಡ್ ಸಪ್ಲೈ ಮಾಡಹತ್ತಿದಾಗ ಕಿರಣ್‌ಗೆ ಸೋಜಿಗ. ಅದರ ಬೆನ್ನುಬಿದ್ದಾಗ ಆ ವಿಳಾಸಗಳಲ್ಲಿ ಹೋಟೆಲ್‌ಗಳೇ ಇರಲಿಲ್ಲ. ನಾಲ್ಕನೇ ಅಂತಸ್ತಿನಲ್ಲೆಲ್ಲೋ ಸಣ್ಣಕೋಣೆಯಲ್ಲಿ ಸಾಮಾನು ಸಾಮಗ್ರಿಗಳ ಒಟ್ಟಿಕೊಂಡು ಹೊಲಸುಗಳ ನಡುವೆಯೇ ಪದಾರ್ಥಗಳನ್ನು ಮೊದಲೇ ತಯಾರಿಸಿಕೊಂಡು ಆರ್ಡರ್ ಬಂದೊಡನೆ ಬೇಯಿಸಿ ಕೊಡುವ ಅವರುಗಳ ಬಿರಿಯಾನಿ, ಫಿಶ್‌ಮಸಾಲ, ಪೀಜ್ಜಾ, ತಂದೂರಿ, ಹೋಳಿಗೆ, ಹಲ್ವ ಯಾವುದರಲ್ಲೂ ಶುಚಿಯೂ ಇರಲಿಲ್ಲ, ರುಚಿಯೂ ಇರಲಿಲ್ಲ. ತಂದುಕೊಟ್ಟವನನ್ನು ದುಡ್ಡು ಎಣಿಸಿಕೊಂಡಾಗಲೇ ಹೋಗಿರುತ್ತಿದ್ದರಿಂದಾಗಿ ಪ್ರಶ್ನಿಸೋದು ಯಾರನ್ನು? ಇಂತಹ ಹಲವು ದಂಧೆಗಳನ್ನು ಬಯಲು ಮಾಡಿದಾಗ ಪ್ರೇಕ್ಷಕರು ಇವನ 'ಮಿಡ್‌ನೈಟ್ ರೌಂಡ್ಸ್'ಗಾಗಿಯೇ ರಾತ್ರಿ ಹತ್ತು ಗಂಟೆಯಾಗುತ್ತಲೇ ಚಕ್ಕಂಬಕ್ಕಳ ಹಾಕಿ ಟೀವಿ ಮುಂದೆ ಕೂರುವಂತಾದರು.

ಏನು ತೋರಿಸಿದರೂ 'ನಮ್ಮಲ್ಲೇ ಮೊದಲು' ಎಂದು ಬೀಗಲಾರಂಭಿಸಿದ ಕಿರಣ್, ಸ್ಟೋರಿ ಮಾಡಲು ವಸ್ತು ಸಿಗದಿದ್ದಾಗ ಗಲಿಬಿಲಿಗೊಳ್ಳುತ್ತಿದ್ದ. ಗಳಿಸಿದ ಜನಪ್ರಿಯತೆ, ಏರುತ್ತಿರುವ ಟಿ.ಆರ್.ಪಿ. ಉಳಿಸಿಕೊಳ್ಳುವ ಸಲುವಾಗಿ ವಸ್ತುವಿನ ಬೇಟೆಗೆ ಅಣಿಯಾಗುತ್ತಿದ್ದ. ಹೀಗಾಗಿ ಹಸಿಬಿಸಿ ಕಾರ್ಯಕ್ರಮಗಳು, ಎಲ್ಲೋ ನಡೆದ ಗ್ಯಾಂಗ್‌ರೇಪ್‌ಗಳನ್ನು ವರ್ಣರಂಜಿತವಾಗಿ ಬಣ್ಣಿಸಿ ರೀ ಶೂಟ್ ಮಾಡಹತ್ತಿದ. ಅದಕ್ಕಾಗಿ ತನ್ನದೇ ನೆಟ್‌ವರ್ಕ್ ಸೃಷ್ಟಿಸಿಕೊಂಡ. ದುಡ್ಡು ಮಾಡಿದವರನ್ನು ಕಂಡು ಕರಬುವವರ ಗುಂಪು ಸದಾ ಇವನ ಬಳಿ ಹೊಸಹೊಸ ವಸ್ತು ಹಿಡಿದು ಬರುವುದು ಮಾಮೂಲಾಯಿತು. ಯಾವುದನ್ನು ನಂಬೋದು? ಯಾವುದನ್ನು ಬಿಡೋದು? ಎಂಬ ಜಿಜ್ಞಾಸೆ ಬೇರೆ. ಇದೀಗ ಕೈತುಂಬಾ ವೇತನ ಸಿಕ್ಕರೂ ನೆಮ್ಮದಿ ಮಾಯ. ಪೊಲೀಸ್ ಸ್ಟೇಶನ್‌ಗಳಲ್ಲಿ ದುಡಿವ ಲೇಡಿ ಕಾನ್‌ಸ್ಟೇಬಲ್‌ಗಳ ಮೇಲಾಗುವ ನೈಟ್‌ಡ್ಯೂಟಿ ದೌರ್ಜನ್ಯಗಳ ಸೀರಿಯಲ್ಲೇ ಸೃಷ್ಟಿಸಿ ನೋಡುಗರನ್ನು ನಿಬ್ಬೆರಗಾಗಿಸಿದ. ಲೇಡಿಸ್ ಹಾಸ್ಟೆಲ್‌ಗಳಲ್ಲಿನ ಸಲಿಂಗಕಾಮಗಳೂ ಅವನ ಕ್ಯಾಮೆರಾವನ್ನು ಮುತ್ತಿಟ್ಟವು. ಕೆಲವನ್ನು 'ಬ್ಲರ್' ಮಾಡಿತೋರಿದರೂ ನೋಡುಗರು ಬಾಯಿಚಪ್ಪರಿಸಿದರು. ಮಹಿಳಾಮಣಿಗಳು ಶಾಪವಿತ್ತರು. ಕೋಟಿಗಟ್ಟಲೆ ಪಡೆದು ಪಕ್ಷಾಂತರ ಮಾಡುವ ರೆಸಾರ್ಟ್ ರಾಜಕಾರಣಿಗಳ ಬೆನ್ನುಬಿದ್ದು ನಮ್ಮಲ್ಲೇ ಮೊದಲು ಎಂದು ದಿನವೆಲ್ಲಾ ತೋರುವ 'ಧೀರ ಟಿವಿ'ಯ ಧೀರತೆ ಅನೇಕರಲ್ಲಿ ಅಧೀರತೆ, ಅಸಹ್ಯ ಹುಟ್ಟಿಸಿದ್ದೂ ಉಂಟು.

ಏನಕೇನ ಪ್ರಕಾರೇಣ ಕಿರಣ್ ಸ್ಟಾರ್‌ವಾಲ್ಯೂ ಹೆಚ್ಚಿಸಿಕೊಂಡನಾದರೂ ಶತ್ರುಗಳ ಸಂಖ್ಯೆಯೂ ಹೆಚ್ಚಿತು. ಅಧೀರನಾಗಲಿಲ್ಲ. ಆತುರಕ್ಕೆ ಬಿದ್ದು ಹಸಿಬಿಸಿ ದೃಶ್ಯಗಳನ್ನೆಲ್ಲಾ ಸೆರೆಹಿಡಿದ. ಪ್ರಖ್ಯಾತ ಕುಟುಂಬಗಳ ಅನೈತಿಕ ಸಂಬಂಧಗಳನ್ನು ಹೆಕ್ಕಿ ತೆಗೆದು ತೋರಿಸಿ ಮಾನ ಹರಾಜಿಗಿಟ್ಟ. ಎಲ್ಲಾ ಚಾನಲ್‌ಗಳೂ ಸ್ಪರ್ಧೆಗಿಳಿದವು. ಈಗವನು ಇವುಗಳು ತನ್ನನ್ನು 'ಕಾಪಿ' ಮಾಡುತ್ತಿವೆಯೆಂದು ಜರೆದ. ನಮ್ಮಲ್ಲೇ ಮೊದಲು ಎಂದು ಬೊಂಬ್ಡಿ ಬಜಾಯಿಸಹತ್ತಿದ. ಎಂತಹ ಅಡ್ಡೆಯಾಗಲಿ